## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 706 |
| ಸದಸ್ಯರ ಹೆಸರು | : | ಶ್ರೀ ಎಸ್. ರುದ್ರೇಗೌಡ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21-02-2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಹರಿಹರದಿಂದ ಹೊನ್ನಾಳಿ ಮೂಲಕ ಶಿವಮೊಗ್ಗ ತಲುಪುವ ರಾಜ್ಯ ಹೆದ್ದಾರಿಯು ಉತ್ತರ ಕರ್ನಾಟಕ ಮಧ್ಯ ಕರ್ನಾಟಕ ಕರಾವಳಿಗೆ ಸಂಪರ್ಕವಿರುವ ಅತ್ಯಂತ ಸಮೀಪದ ರಸ್ತೆಯಾಗಿರುವುದು ನಿಜವೇ : | ಹರಿಹರದಿಂದ ಹೊನ್ನಾಳಿ ಮೂಲಕ ಶಿವಮೊಗ್ಗ ತಲುಪುವ ರಾಜ್ಯ ಹೆದ್ದಾರಿಯು ಉತ್ತರ ಕರ್ನಾಟಕದಿಂದ ಕರಾವಳಿ ಕರ್ನಾಟಕಕ್ಕೆ ಸಂಪರ್ಕವಿರುವ ಅತ್ಯಂತ ಸಮೀಪದ ರಸ್ತೆಯಾಗಿರುತ್ತದೆ. |
| ಆ | ಈ ರಸ್ತೆಯಲ್ಲಿ ವಾಹನಗಳ ಸಂಚಾರವು ಅತೀ ಹೆಚ್ಚು ಇದ್ದು, ಈ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಕಾರ್ಯವು ಅತ್ಯಂತ ಅವಶ್ಯಕವಾಗಿರುವುದರಿಂದ ಸರ್ಕಾರವು ಕ್ರಮವಹಿಸುವುದೇ: | ಹರಿಹರದಿಂದ ಹೊನ್ನಾಳಿವರೆಗಿನ ರಸ್ತೆಯ ಉದ್ದವು 33.00 ಕಿ.ಮೀ. ಇದ್ದು, ಹೊನ್ನಾಳಿಯಿಂದ ಶಿವಮೊಗ್ಗವರೆಗೆ 41.46 ಕಿ.ಮೀ. ಉದ್ದವಿರುತ್ತದೆ. **ಒಟ್ಟಾರೆಯಾಗಿ ಹರಿಹರದಿಂದ ಶಿವಮೊಗ್ಗ ವರೆಗೆ 74.46 ಕಿ.ಮೀ. ಉದ್ದವಿರುತ್ತದೆ.**<br><br>2023ನೇ ವಾಹನ ಸಂಚಾರ ಗಣತಿಯ ಪ್ರಕಾರ ಸದರಿ ರಸ್ತೆಯ PCU 17387 ಇದ್ದು, ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಅವಶ್ಯಕತೆ ಇರುತ್ತದೆ. |
| ಇ | ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು) | ಹರಿಹರದಿಂದ ಹೊನ್ನಾಳಿ ಮೂಲಕ ಶಿವಮೊಗ್ಗ ತಲುಪುವ ರಾಜ್ಯ ಹೆದ್ದಾರಿ-25ನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು In-principle Approved NH ಎಂದು ಕೇಂದ್ರ ಭೂ ಸಾರಿಗೆ ಮಂತ್ರಾಲಯದಿಂದ ವಿಸ್ತೃತ ಯೋಜನಾ ವರದಿ ತಯಾರಿಸಲು ತಾತ್ವಿಕವಾಗಿ ಅನುಮೋದನೆಯನ್ನು ದಿನಾಂಕ: 28.07.2017 ರಂದು ನೀಡಲಾಗಿರುತ್ತದೆ.<br><br>ಈ ಮಧ್ಯೆ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ತಾತ್ವಿಕವಾಗಿ ಅನುಮೋದನೆಗೊಂಡ ರಸ್ತೆಗಳ ವಿಸ್ತೃತ ಯೋಜನಾ ವರದಿ ತಯಾರಿಸುವ ಕಾರ್ಯವನ್ನು ಯಥಾಸ್ಥಿತಿ ಮುಕ್ತಾಯಗೊಳಿಸಲು ಕೇಂದ್ರ ಭೂ ಸಾರಿಗೆ ಮಂತ್ರಾಲಯದ ಪತ್ರ ಸಂಖ್ಯೆ:RW/NH-33044/24/2020 – S&R(P&D) ದಿನಾಂಕ:28.07.2020 ರಲ್ಲಿ ನಿರ್ದೇಶಿಸಲಾಗಿರುವುದರಿಂದ, ಅದರಂತೆ ತಾತ್ವಿಕವಾಗಿ |

| | | |
|---|---|---|
| | | ಅನುಮೋದನೆಗೊಂಡ ಪ್ರಸ್ತಾವನೆಯನ್ನು ಯಥಾಸ್ಥಿತಿ ಪೂರ್ವ ಮುಕ್ತಾಯಗೊಳಿಸಲಾಗಿರುತ್ತದೆ.<br><br>ಆದಾಗ್ಯೂ, ಜನಪ್ರತಿನಿಧಿಗಳ ಕೋರಿಕೆಯ ಮೇರೆಗೆ ದಿನಾಂಕ: 21.03.2023 ರಂದು ರಾಜ್ಯ ಹೆದ್ದಾರಿ–25 ಶಿವಮೊಗ್ಗ – ಹೊನ್ನಾಳಿ – ಮಲೆಬೆನ್ನೂರು – ಹರಿಹರ– ಹರಪ್ಪನಹಳ್ಳಿ – ಮರಿಯಮ್ಮನಹಳ್ಳಿ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಭೂ ಸಾರಿಗೆ ಮಂತ್ರಾಲಯಕ್ಕೆ ರಾಜ್ಯ ಸರ್ಕಾರದಿಂದ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಿ, ವಿಸ್ತೃತ ಯೋಜನಾ ವರದಿ ತಯಾರಿಕೆಗೆ ಅನುಮತಿ ನೀಡುವಂತೆ ಕೋರಲಾಗಿದೆ. |

ಕಡತ ಸಂಖ್ಯೆ: ಲೋಇ 59 ಸಿಎನ್‌ಹೆಚ್ 2024 (ಇ)

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು